ಎಸ್.ಸಿ.ಸಂಖ್ಯೆಃ 1380/2021
ಫ್ರಾ.ಸಾ-1

# ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆಃ

ಚಾ.ಸಾ-1 ಫ್ರಾ.ಸಾ-1

ದಿಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಬಸವರಾಜಯ್ಯ |
| ತಂದೆ ಹೆಸರು | ಸಿದ್ಧಲಿಂಗಯ್ಯ |
| ವಯಸ್ಸು | 66 ವರ್ಷ |
| ವೃತ್ತಿ | ನಿವೃತ್ತ ಪಿ.ಎಸ್.ಐ. |
| ವಿಳಾಸ | ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು 2015 ರಿಂದ 2020 ರವರೆಗೆ ಜ್ಞಾನಭಾರತಿ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 7.2.2020ರಂದು ಸಂಜೆ 6 ಗಂಟೆ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ನನಗೆ ಬಾತ್ಮಿದಾರರಿಂದ ಒಂದು ಮಾಹಿತಿ ಬಂದಿದ್ದೇನೆಂದರೆ ವಿಶ್ವೇಶ್ವರಯ್ಯ ಲೇಔಟ್, 4ನೇ ಬ್ಲಾಕ್ , ಹನುಮಗೌಡ ಮನೆಯ ಪಕ್ಕದ ರಸ್ತೆಯಿಂದ ನೈಸ್ ರಸ್ತೆಗೆ ಹೋಗುವ ಆಲದ ಮರದ ಬಳಿಯಲಬ್ಲಿ 5-6 ಜನ ಆಸಾಮಿಗಳು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ದಾರಿಯಲ್ಲಿ ಓಡಾಡುವವರನ್ನು ದರೋಡೆ ಮಾಡಲು ಸಂಚು ಮಾಡುತ್ತಿದ್ದಾರೆ ಎಂದು.

3. ಅದರಂತೆ ನಾನು ನಮ್ಮ ಸಿಬ್ಬಂದಿಗಳಾದ ಚಾ.ಸಾ-4 ರಿಂದ ಚಾ.ಸಾ-8 ರವರನ್ನು ಹಾಗು ಚಾ.ಸಾ-2 ಮತ್ತು 3 ಪಂಚರನ್ನು ಕರೆಸಿಕೊಂಡು ಅವರಿಗೆ ನನಗೆ ಬಂದ ಮಾಹಿತಿಯನ್ನು ತಿಳಿಸಿದ್ದೇನೆ. ನಾವೆಲ್ಲರೂ ಸಂಜೆ 6.15ಕ್ಕೆ ಠಾಣೆಯಿಂದ ಹೊರಟು 6.30ರ ಸುಮಾರಿಗೆ ಸದರಿ ಸ್ಥಳಕ್ಕೆ ಹೋಗಿ ಅಲ್ಲಿ ಬಾತ್ಮಿ ಮಾಹಿತಿಯನ್ನು ಖಚಿತಪಡಿಸಿಕೊಂಡೆನು. ನಾವೆಲ್ಲರೂ ಸದರಿ ವ್ಯಕ್ತಿಗಳ ಮೇಲೆ ದಾಳಿ ಮಾಡಿದಾಗ, 1 ರಿಂದ 6 ಆರೋಪಿತರು ಸ್ಥಳದಲ್ಲಿ ಸಿಕ್ಕಿದರು ಮತ್ತು ನಾನು ಅವರ ಕಡೆಯಿಂದ ಎರಡು ಚಾಕು, ಒಂದು ಸ್ಪ್ರೇ ಗಳನ್ನು ವಶಕ್ಕೆ ಪಡೆದೆನು. ಈ ಬಗ್ಗೆ ನಾನು ಪಂಚರ ಸಮಕ್ಷಮ ಸ್ಥಳದಲ್ಲೆ ಅಮಾನತು ಪಂಚನಾಮೆ ಕ್ರಮವನ್ನು ಜರುಗಿಸಿದ್ದೇನೆ. ಅದು ನಿ.ಪಿ-1 ಎಂದು ಇದ್ದು, ಅದರ ಮೇಲೆ ನನ್ನ ಸಹಿ ನಿ.ಪಿ-1(ಎ) ಎಂದು ಇರುತ್ತದೆ.

3. (ಈ ಹಂತದಲ್ಲಿ ಸೀಲು ಮಾಡಲಾದ ವಸ್ತುಗಳನ್ನುನ್ಯಾಯಾಲಯದ ಮುಂದೆ ತೆರೆದು ಸಾಕ್ಷಿಗೆ ತೋರಿಸಲಾಯಿತು.) ಸ್ಥಳದಲ್ಲಿ ವಶಕ್ಕೆ ಪಡೆದ ಮಾಲುಗಳನ್ನು ನ್ಯಾಯಾಲಯದ ಮುಂದೆ ಗುರುತಿಸುತ್ತಿದ್ದು, ಅದನ್ನು ಕ್ರಮವಾಗಿ ಮು.ಮಾ-1 ರಿಂದ 3 ಎಂದು ಗುರುತಿಸಲಾಯಿತು. ನಾವೆಲ್ಲರೂ 1 ರಿಂದ 6 ಆರೋಪಿತರು ಹಾಗು ಮಾಲುಗಳ ಸಮೇತ ಠಾಣೆಗೆ ಹಿಂದಿರುಗಿದೆವು. ನಾನು ಈ ಬಗ್ಗೆ ಒಂದು ವರದಿಯನ್ನು ತಯಾರು ಮಾಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು, ಅದನ್ನು ನಿ.ಪಿ-2 ಎಂದು ಹಾಗು ನನ್ನ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸದರಿ ವರದಿಯ ಆಧಾರದ ಮೇಲೆ ನಾನು ನಮ್ಮ ಠಾಣಾ ಗುನ್ನೆ ಸಂಖ್ಯೆ

43/2020 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ-3 ಎಂದು ಗುರುತಿಸಲಾಯಿತು.

4. ನಾನು ಸದರಿ ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 14/2020 ರಲ್ಲಿ ಅಳವಡಿಸಿಕೊಂಡಿರುತ್ತೇನೆ. 1 ರಿಂದ 6 ಆರೋಪಿತರನ್ನು ನಾನು ವಿಚಾರಣೆಗೆ ಒಳಪಡಿಸಿ, ಅವರ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿದ್ದೇನೆ. ಚಾ.ಸಾ-2 ರಿಂದ 8 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ನಂತರ ಆರೋಪಿತರನ್ನು ನಾನು ದಸ್ತಗಿರಿ ಕ್ರಮ ಅನುಸರಿಸಿ, ದಿಃ 8.2.2020 ರಂದು ನ್ಯಾಯಾಲಯದ ಮುಂದೆ ರಿಮ್ಯಾಂಡ್ ಅರ್ಜಿಯೊಂದಿಗೆ ಹಾಜರುಪಡಿಸಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ. ಕೇಸಿನ ಸಂಪೂರ್ಣ ತನಿಖೆಯನ್ನು ಮುಗಿಸಿ, ಆರೋಪಿತರ ವಿರುದ್ಧ ದೋಷಾರೋಪಣ ಪತ್ರ ವನ್ನು ನಿವೇದಿಸಿಕೊಂಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟಿಸವಾಲುಃ ಶ್ರೀಮತಿ ಎನ್.ಡಿ., ಆರೋಪಿತರ ಪರ ವಕೀಲರಿಂದಃ</u>

5. ನಾನು ಮೇಲೆ ಹೇಳಿದಂತೆ ನನಗೆ ಯಾವುದೇ ಬಾತ್ಮಿ ಸಂದೇಶ ಬಂದಿರಲಿಲ್ಲ ಮತ್ತು ನಾನು ಚಾ.ಸಾ-2 ರಿಂದ 8 ರವರ ಜೊತೆಯಲ್ಲಿ ಘಟನಾ ಸ್ಥಳಕ್ಕೆ ಹೋಗಿ ದಾಳಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. 1 ರಿಂದ 6 ಆರೋಪಿತರನ್ನು ಘಟನಾ ಸ್ಥಳದಲ್ಲಿ ಸೆರೆಹಿಡಿದಿರಲಿಲ್ಲ ಮತ್ತು ಅವರಿಂದ

ಮು.ಮಾ-1 ರಿಂದ 3 ಅನ್ನು ನಿ.ಪಿ-1ರಂತೆ ಪಂಚನಾಮೆ ಮಾಡಿ ವಶಕ್ಕೆ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನಾಗಲಿ ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡದೇ ಇದ್ದರೂ ನಮ್ಮ ಠಾಣಾ ಅಂಕಿ ಅಂಶಕ್ಕೋಸ್ಕರ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಡಿ, ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.